ಉಳಿದ ಹಣವನ್ನು ರೈತರು ಸಹಕಾರೀ ಸಾಲ ಸಂಸ್ಥೆಗಳಿಂದ ತೆಗೆದುಕೊಂಡ ಅಲ್ಪಾವಧಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದುದರಿಂದ ಉಂಟಾದ ನಷ್ಟವನ್ನು ಭರಿಸಲು ಉಪಯೋಗಿಸಲಾಗಿದೆ.

ಅ) ಉದ್ಭವಿಸುವುದಿಲ್ಲ.

ಆ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಹಿಂದಿನ ವರ್ಷದ ಅನುದಾನವನ್ನು ಪೂರ್ತಿಯಾಗಿ ಬಿಡುಗಡೆ ಮಾಡಲಾಗಿದೆ.

ಊ) ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ, ಹಣವನ್ನು ಬಳಸಿಕೊಳ್ಳಲಾಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಬಸ್ ಸೌಲಭ್ಯ

1373 (926) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ, ಮಡಮರ ಗಟ್ಟ, ಕಪ್ಪರ, ಅಂಗಡಿಗೆರೆ, ದೊಡ್ಡ ಮಾರ್ಗೋನಹಳ್ಳಿಗೆ ಸ್ವತಂತ್ರ್ಯ ಬಂದು 54 ವರ್ಷ ಕಳೆದರೂ ಬಸ್ ಸೌಲಭ್ಯ ಇಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಸ್ ಸೌಕರ್ಯ ಒದಗಿಸದಿರಲು ಕಾರಣವೇನು;

ಇ) ಅನೇಕ ವರ್ಷಗಳಿಂದ ಬೇಡಿಕೆ ಇದ್ದರೂ, ಸರ್ಕಾರ ಸ್ಪಂದಿಸದೇ ಇರಲು ಕಾರಣವೇನು;

ಈ) ಈ ಗ್ರಾಮಗಳಿಗೆ ಕೂಡಲೇ ವಾಹನ ಸೌಲಭ್ಯ ಒದಗಿಸಲು ಕೈಗೊಳ್ಳುವ ಕ್ರಮಗಳೇನು;

ಉ) ಎಂದಿನಿಂದ ಪ್ರಾರಂಭಿಸಲಾಗುವುದು;

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ವಿಚಾರವಾಗಿ ಇದುವರೆವಿಗೂ ಸಂಸ್ಥೆಗೆ ಯಾವುದೇ ಬೇಡಿಕೆಗಳು ಬಂದಿರುವುದಿಲ್ಲ.

ಈ) ಸದರಿ ಗ್ರಾಮಗಳಿಗೆ ರಸ್ತೆಯನ್ನು ಅಗಲಗೊಳಿಸಿ ಭಾರಿ ವಾಹನಗಳ ಓಡಾಟಕ್ಕೆ ಯೋಗ್ಯಗೊಳಿಸಿದ ನಂತರ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುವುದು.

ಉ) ಮೇಲಿನಂತೆ.

ತುರುವೇಕೆರೆ ತಾಲ್ಲೂಕಿಗೆ ಎ.ಪಿ.ಡಿ.ಆರ್.ಪಿ ಯೋಜನೆ

1374 (927) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆ ಹಾಗೂ ಸಮರ್ಪಕ ವಿದ್ಯುತ್ ಇಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಮಸ್ಯೆಗಳನ್ನು ನಿವಾರಣೆ ಮಾಡಲು ಹಾಕಿಕೊಂಡಿರುವ ಕಾರ್ಯಕ್ರಮವೇನು?

ಇ) ಎ.ಪಿ.ಡಿ.ಆರ್.ಪಿ.ಯೋಜನೆ ಮುಖಾಂತರ ಈ ಸಮಸ್ಯೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?